ಸರ್ಕಾರದ ಹಂತದಲ್ಲಿ ಪ್ರತಿವಾರ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತ ಸಮವಸ್ತ್ರಗಳನ್ನು ಹಾಗೂ ಪಠ್ಯ ಪುಸ್ತಕಗಳನ್ನು ವಿತರಿಸಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1179(1594)**

ಮಾನ್ಯ ಸದಸ್ಯರ ಹೆಸರು **ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)**

ಅ) ಚಾಮರಾಜನಗರ ಜಿಲ್ಲೆಯಲ್ಲಿ ಉಪ್ಪಾರ ಬಡಾವಣೆಗಳು ಗುಡಿಸಲುಗಳ ಆಗರವಾಗಿರುವುದು ಸರ್ಕಾರದ ಗಮನದಲ್ಲಿದೆಯೇ?

ಹೌದು

ಆ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಉಪ್ಪಾರ ಬಡಾವಣೆ ಹಿಂಭಾಗದ ಪ್ರದೇಶ, ಕೊಳ್ಳೇಗಾಲ ಪಟ್ಟಣದಲ್ಲಿರುವ ಉಪ್ಪಳಗೇರಿ ಮೋಳೆ ಪ್ರದೇಶ ಮತ್ತು ಯಳಂದೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಳೇಪೇಟೆ ಉಪ್ಪಾರ ಬೀದಿ ಕೊಳಚೆ ಪ್ರದೇಶಗಳನ್ನು ಮಂಡಳಿಯ ಕಾಯ್ದೆಯಡಿ ಕೊಳಚೆ ಪ್ರದೇಶಗಳೆಂದು ಘೋಷಿಸಿ ಈಗಾಗಲೇ ಸದರಿ ಪ್ರದೇಶಗಳಲ್ಲಿ ಮಂಡಳಿಯ ವತಿಯಿಂದ ಅನುಧಾನದ ಲಭ್ಯತೆ ಆಧರಿಸಿ ರೂ 4,42,148 090ಗಳ ವೆಚ್ಚದಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ

1) 10 ಸೀಟರಿನ ಶೌಚಾಲಯ
2) ಬಾಕ್ಸ್ ಚರಂಡಿ
3) ಜಲ್ಲಿ ರಸ್ತೆ
4) ಡೆಕ್ ಸ್ಲಾಬ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1181(1597)**

ಮಾನ್ಯ ಸದಸ್ಯರ ಹೆಸರು **ಶ್ರೀ ಆರ್ ಧ್ರುವನಾರಾಯಾಣ (ಸಂತೆಮಾರಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಬದನಾಳು ಏತ ನೀರಾವರಿ ಯೋಜನೆಯನ್ನು ಇದುವರೆವಿಗೂ ಕಾರ್ಯಗತಗೊಳಿಸದಿರುವುದು ಸರ್ಕಾರದ ಗಮನದಲ್ಲಿದೆಯೇ,

ಹೌದು

ಆ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಎಷ್ಟು ಸಮಯ ಬೇಕಾಗುವುದು,

ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೀರ್ಮಾನಿಸಲಾಗುವುದು

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1182(1598)**

ಮಾನ್ಯ ಸದಸ್ಯರ ಹೆಸರು **ಶ್ರೀ ಆರ್ ಧ್ರುವನಾರಾಯಣ (ಸಂತೆಮಾರಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಕಬಿನಿ ಎರಡನೇಯ ಹಂತದ ಯೋಜನೆ ಜಾರಿಗೊಳಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು,

ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೀರ್ಮಾನಿಸಲಾಗುವುದು

ಆ) ಕಾವೇರಿ ನೀರಾವರಿ ತೀರ್ಪಿನಿಂದ ಈ ಯೋಜನೆಗೆ ಅಡ್ಡಿಯಾಗುವುದೇ, ಪರಿಶೀಲಿಸಲಾಗುತ್ತಿದೆ

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1184(1576)**

ಮಾನ್ಯ ಸದಸ್ಯರ ಹೆಸರು **ಶ್ರೀ ಗಡ್ಡದೇವರಮರ್ ಗಡ್ಡಯ್ಯಶಿವಮೂರ್ತಯ್ಯ (ಶಿರಹಟ್ಟಿ)**

ಉತ್ತರಿಸುವ ಸಚಿವರು **ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮಿಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**